ಬಾಲ ಮುದುರಿಕೊಂಡು ಬರುವ ಪ್ರಾಣಿಯಂತೆ, ಬಾವಿಯಿಂದ ಎದ್ದು ಬಂದ. ಸ್ನಾನ ಮುಗಿಸಿ, ದೇವಸ್ಥಾನಕ್ಕೆ ಹೋಗಿ ಸಂಧ್ಯಾವಂದನೆ ಪೂರೈಸಿ, ಏನೂ ಮಾತನಾಡದೆ ಊಟ ಮುಗಿಸಿದ. ಊಟವಾದ ಮೇಲೆ ಅಜ್ಜ ಮಂಚದ ಮೇಲೆ ಸ್ವಲ್ಪ ಹೊತ್ತು ಮಲಗುವುದು ರೂಢಿ. ನಾವೆಲ್ಲ ಮಲಗಿದ್ದೇವೆಂದು ಅವನು ತಿಳಿದಿರಬೇಕು. ಅಜ್ಜನ ಬಳಿ ಹೋಗಿ ಕೈ ಮುಗಿದು, ''ದಯಮಾಡಿ ಅಣ್ಣ, ಅತ್ತಿಗೆಗೆ ಏನೂ ಹೇಳಬೇಡಿ.'' ಎಂದು ದೈನ್ಯದಿಂದ ಅಂಗಲಾಚಿದ.... ''ಛೇ, ಛೇ, ಹಾಗೇನೂ ಇಲ್ಲ. ನೀನು ಬಾವಿಗೆ ಹಾರಿ ಅವಾಂತರ ಮಾಡಿದ್ದಕ್ಕೆ ಹಾಗೆ ಹೇಳಿದೆ ಅಷ್ಟೆ, ಯಾರಿಗೂ ಹೇಳುವುದಿಲ್ಲ, ಹೋಗು, ಮಲಗಿಕೋ'' ಎಂದು ಅಜ್ಜ ಸಮಾಧಾನ ಮಾಡಿದರು.

ಕೇಶಪ್ಪಚ್ಚಿಯ ಕಾರ್ಯಕ್ಷೇತ್ರಗಳು ಸೀಮಾತೀತವಾಗಿದ್ದವು. ಅಜ್ಜಿ ಮನೆಯ ಹಿಂದಿನ ಗುಡ್ಡದ ಮೇಲೆ ನಾವು ಮುರುಗಲ, ಗೇರುಹಣ್ಣು, ಮುಳ್ಳುಹಣ್ಣು ಸಂಗ್ರಹಿಸಲು ಹೊರಟರೆ ಅವನೂ ಬಂದ. ಎತ್ತರದಲ್ಲಿರುವ ಹಣ್ಣುಗಳನ್ನು ಕೊಯ್ಯಲು ಅವನ ಸಹಾಯ ಸಿಕ್ಕಿದ್ದು ಒಳ್ಳೆಯದಾಯಿತು. ಈ ಗುಡ್ಡದಿಂದ ಹೀಗೇ ಮುಂದೆ ಹೋದರೆ ನಾವೆಲ್ಲಿಗೆ ಹೋಗಬಹುದು? – ಎಂಬಂಥ ನಮ್ಮ ಕುತೂಹಲದ ಪ್ರಶ್ನೆಗಳಿಗೆ ಅವನಲ್ಲಿ ಉತ್ತರ ಸದಾ ಸಿದ್ಧವಾಗಿರುತ್ತಿತ್ತು. ಅಗಸ್ತ್ಯಗುಹೆಯ ಒಳಗಿಂದ ಹೊರಟರೆ ಸೀದಾ ಹಿಮಾಲಯಕ್ಕೋ, ಕಾಶಿಗೋ ಏನೋ ಹೋಗಿ ಸೇರಬಹುದಂತೆ! ಆದರೆ, ಹಾಗೆ ಮಾಡಲು ಹೋಗಬೇಡಿ. ಗೋಕರ್ಣದ ದೀಕ್ಷಿತರೊಬ್ಬರು ಹಾಗೆ ಹೋಗಿ ವಾಪಸು ಬಂದೇ ಇಲ್ಲವೆಂದು ನಮ್ಮನ್ನು ಕಂಗಾಲು ಮಾಡಿದ. ಅಗತ್ಯವೇ ಇಲ್ಲದೆ ತೆಂಗಿನಮರ ಹತ್ತಿಬಿಡುತ್ತಿದ್ದ. 'ಈಗ ಬರುತ್ತೇನೆ' ಎಂದು ಗುಡ್ಡದಲ್ಲಿ ಆಚೆ ಹೋದವನು ಅರ್ಧ ಗಂಟೆ ಕಾಲ ಕಾಣಿಸಿಕೊಳ್ಳದೆ ಸತಾಯಿಸಿದ್ದೂ ಉಂಟು. ನಾವು ಅಳುಮುಖ ಮಾಡಿಕೊಂಡು 'ಕೇಶಪ್ಪಚ್ಚಿ' ಎಂದು ಕೂಗುವುದನ್ನು ಅಡಗಿಕೊಂಡು ನೋಡಿ ನಗುತ್ತಿದ್ದ. ಅವನ ಕೀಟಲೆ ಜಾಸ್ತಿಯಾದಾಗ ನಾಳೆ ನೀನು ನಮ್ಮೊಟ್ಟಿಗೆ ಬರುವುದೇ ಬೇಡವೆಂದು ಹೇಳುತ್ತಿದ್ದೆವು. ಆಗ ಸೂಚನೆ ಸಣ್ಣ ಮುಖ ಮಾಡಿಕೊಂಡು, ''ಆಯ್ತು ಬಿಡಿ, ನಿಮಗೆ ಇಷ್ಟ ಇಲ್ಲ ಎಂದರೆ ನನಗೂ ಬೇಡ. ಉಪ್ಪಿನಪಟ್ಟಣಕ್ಕೆ ನಾಲ್ಕು ದಿನ ಬಿಟ್ಟು ಹೊರಡುವವನಿದ್ದೆ, ಇವತ್ತೇ ಹೊರಟುಬಿಡುತ್ತೇನೆ''

